**International Journal of Academic Research**
P-ISSN: 2348-7666: Impact Factor: 7.215
Homepage: https://www.ijar.org.in/
Volume-13, Issue-2, April-June-2026
This work is licensed under a Creative Commons Attribution 4.0 International License [CC BY 4.0]

**Research Article**

# ‘ಧರ್ಮಶ್ರೀ’ : ಮತದ ಸವಾರಿಯ ಕಾದಂಬರಿ

**ಡಾ. ಜಯಶಂಕರ ಎಂ.**

ಸಹ ಪ್ರಾಧ್ಯಾಪಕ, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನಂಜನಗೂಡು, ಮೈಸೂರು ಜಿಲ್ಲೆ- 571 301

**Corresponding Author:** ಡಾ. ಜಯಶಂಕರ ಎಂ.

**Abstract**

ಎಸ್.ಎಲ್. ಭೈರಪ್ಪನವರ ‘ಧರ್ಮಶ್ರೀ’ ಕಾದಂಬರಿಯು ಸನಾತನ ವೈದಿಕ ಧರ್ಮದ ಮೌಲ್ಯಗಳು, ಮತಾಂತರ, ಧಾರ್ಮಿಕ ಅಸಹಿಷ್ಣುತೆ ಮತ್ತು ಮತೀಯವಾದದ ಸ್ವರೂಪವನ್ನು ವಿಶ್ಲೇಷಿಸಲು ಅವಕಾಶ ಕಲ್ಪಿಸುವ ಕೃತಿಯಾಗಿದೆ. ಕಾದಂಬರಿಯ ಕೇಂದ್ರಪಾತ್ರ ಸತ್ಯನಾರಾಯಣನ ಮೂಲಕ ಧಾರ್ಮಿಕ ನಿಷ್ಠೆ ಮತ್ತು ಮಾನವೀಯ ಮೌಲ್ಯಗಳ ನಡುವಿನ ಸಂಘರ್ಷವನ್ನು ಲೇಖನವು ಪರಿಶೀಲಿಸುತ್ತದೆ. ಕ್ರೈಸ್ತ ಧರ್ಮದ ಬಗೆಗಿನ ಅವನ ಅಸಹನೆ, ಜಾತೀಯ ಮನೋಭಾವ, ಲಿಲ್ಲಿಯ ಪ್ರೇಮದ ನಿರಾಕರಣೆ ಹಾಗೂ ಕುಟುಂಬದ ಬಗೆಗಿನ ನಿರ್ಲಕ್ಷ್ಯಗಳು ಅವನ ಧಾರ್ಮಿಕ ಆದರ್ಶಗಳಲ್ಲಿನ ವೈರುಧ್ಯಗಳನ್ನು ಅನಾವರಣಗೊಳಿಸುತ್ತವೆ. ಕಾದಂಬರಿಯ ನಿರೂಪಣೆಯಲ್ಲಿ ಲೇಖಕರು ಸನಾತನ ಹಿಂದೂ ಧರ್ಮದ ಪ್ರತಿಷ್ಠಾಪನೆಗೆ ಆದ್ಯತೆ ನೀಡಿರುವುದನ್ನು ಲೇಖನವು ವಿಮರ್ಶಾತ್ಮಕವಾಗಿ ಗುರುತಿಸುತ್ತದೆ. ಧರ್ಮ ಮತ್ತು ಧಾರ್ಮಿಕ ಮೂಲಭೂತವಾದಗಳ ನಡುವಿನ ವ್ಯತ್ಯಾಸವನ್ನು ಸ್ಪಷ್ಟಪಡಿಸುತ್ತಾ, ಧಾರ್ಮಿಕ ಸಂಘರ್ಷಗಳು ಸಹಬಾಳ್ವೆ ಹಾಗೂ ಮಾನವೀಯತೆಯ ಮೇಲೆ ಬೀರುವ ಪರಿಣಾಮಗಳನ್ನು ಚರ್ಚಿಸುತ್ತದೆ. ಜೊತೆಗೆ, ಭೈರಪ್ಪನವರ ‘ಆವರಣ’ ಮತ್ತು ಶಿವರಾಮ ಕಾರಂತರ ‘ಚೋಮನದುಡಿ’ ಕಾದಂಬರಿಗಳೊಂದಿಗೆ ತುಲನಾತ್ಮಕ ಅಧ್ಯಯನದ ಸಾಧ್ಯತೆಗಳನ್ನು ಗುರುತಿಸಿ, ಕನ್ನಡ ಸಾಹಿತ್ಯದಲ್ಲಿ ಮತೀಯವಾದ, ಜಾತೀಯತೆ, ಮತಾಂತರ ಮತ್ತು ಚಾರಿತ್ರಿಕ ಕಥನಗಳ ಅಧ್ಯಯನಕ್ಕೆ ಹೊಸ ಆಯಾಮಗಳನ್ನು ತೆರೆದಿಡುತ್ತದೆ.

**Keywords:** ಧರ್ಮಶ್ರೀ, ಎಸ್.ಎಲ್. ಭೈರಪ್ಪ, ಸನಾತನ ಧರ್ಮ, ವೈದಿಕ ತತ್ತ್ವ, ಮತೀಯವಾದ, ಧಾರ್ಮಿಕ ಮೂಲಭೂತವಾದ, ಧಾರ್ಮಿಕ ಅಸಹಿಷ್ಣುತೆ, ಮತಾಂತರ, ಜಾತೀಯತೆ, ಬ್ರಾಹ್ಮಣವಾದ, ಮಾನವೀಯ ಮೌಲ್ಯಗಳು, ಧಾರ್ಮಿಕ ಸಂಘರ್ಷ, ಸಹಬಾಳ್ವೆ, ಆವರಣ, ತುಲನಾತ್ಮಕ ಸಾಹಿತ್ಯ ಅಧ್ಯಯನ.

**‘ಧರ್ಮಶ್ರೀ’ : ಮತದ ಸವಾರಿಯ ಕಾದಂಬರಿ**

ಎಸ್.ಎಲ್. ಭೈರಪ್ಪನವರ ‘ಧರ್ಮಶ್ರೀ’ ಕಾದಂಬರಿಯು ಅಸಮಾನತೆಯನ್ನು ಒಪ್ಪುವ ವೈದಿಕ ಜೀವನವಿಧಾನದ ಸನಾತನ ಮೌಲ್ಯಗಳನ್ನು ಪುನರ್ ನೆಲೆಗೊಳಿಸುವ ಕಥನವಾಗಿದೆ. ನಗರದಲ್ಲಿ ನೆಲೆಯೂರಿರುವ ಹಳ್ಳಿಯ ಬ್ರಾಹ್ಮಣ ಯುವಕ ಸತ್ಯನಾರಾಯಣನ ತಳಮಳ, ಗೊಂದಲ, ವೈರುಧ್ಯಗಳು, ಕ್ರೈಸ್ತ ಮಿಷನರಿಗಳ ಧರ್ಮ ಪ್ರಚಾರ, ಹಿಂದೂ ಸಂಘದ ಚಟುವಟಿಕೆಗಳು, ಮತಾಂತರಗಳನ್ನು ತನ್ನ ಒಡಲೊಳಗೆ ಹೊಂದಿರುವ ‘ಧರ್ಮಶ್ರೀ’ ಕಾದಂಬರಿಯು ವೈದಿಕ ಪುನರುತ್ಥಾನದ ಸಂಕಥನವೂ ಆಗಿದೆ. ಇಲ್ಲಿ ಹಲವು ಕಡೆ ಮುಖ್ಯವಾಗಿ ಮತಾಂತರದ ಸಂದರ್ಭದಲ್ಲಿ ಕಾದಂಬರಿಕಾರ ತನ್ನ ಕಲಾ ಸೃಷ್ಟಿಯ ಆಚೆಗೆ ನಿರ್ವಹಿಸುತ್ತಿರುವ ವಕೀಲಿತನದ ನಿರೂಪಣೆಗಳು ಇವೆ. ಕಾದಂಬರಿಯ ಕೇಂದ್ರಪಾತ್ರವಾಗಿರುವ ಸತ್ಯನಾರಾಯಣನು ಎಡತಾಕುವ ಲಿಲ್ಲಿ, ರಾಚಮ್ಮ, ಕ್ರೈಸ್ತ ಪಾದ್ರಿಗಳಿಗೆ ಸನಾತನ ಧರ್ಮದ ಮಹತ್ವವನ್ನು ಕಾದಂಬರಿಯ ಹಲವು ಸ್ತರಗಳಲ್ಲಿ ಹೇಳುತ್ತಲೇ ಬರುತ್ತಾನೆ. ‘ಧರ್ಮಶ್ರೀ’ಯ ಈ ‘ಸತ್ಯ’ ಕೇವಲ ನಾಮರೂಪವಾಗಿರದೆ ತನ್ನ ತಾತ್ವಿಕ ತಿಳುವಳಿಕೆಗಳೆಲ್ಲವೂ ತನ್ನ ಹೆಸರಿಗೆ ಅನ್ವರ್ಥವಾಗುವಂತೆ ಸತ್ಯವೇ, ದಿಟವೇ ಆಗಿವೆ ಎಂದು ನಂಬಿದ್ದಾನೆ. ಕಾದಂಬರಿಕಾರರು ನಾಯಕನಿಗೆ ಸತ್ಯನಾರಾಯಣ ಎಂಬ ಹೆಸರನ್ನು ಪ್ರಜ್ಞಾಪೂರ್ವಕವಾಗಿಯೇ ಇಟ್ಟಿದ್ದಾರೆ ಅನಿಸುತ್ತದೆ. ಕಡು ಹಿಂದೂವಾದಿಯಾದ ಸತ್ಯನಾರಾಯಣನನ್ನೂ ಒಳಗೊಂಡಂತೆ ಅವನ ಗೆಳೆಯರಾದ ಶಂಕರ, ರಾಮಣ್ಣ – ಮೂವರು ಕಾದಂಬರಿಯಲ್ಲಿ ಬಲವಾಗಿ

ಸನಾತನ ಹಿಂದೂ ಹೆಸರಿನ ಅಸಮಾನತೆಯನ್ನು ಪ್ರತಿಪಾದಿಸುವ, ಮುಂದುವರೆಸುವ ಮತವನ್ನು ಪ್ರತಿನಿಧಿಸುತ್ತಾರೆ. ಇವರು ಪ್ರತಿನಿಧಿಸುವ ಮೌಲ್ಯಗಳು ಬ್ರಾಹ್ಮಣವಾದದ ಮೌಲ್ಯಗಳೇ ಆಗಿವೆ. ರಾಚಮ್ಮ ಮತ್ತು ಸತ್ಯ ಒಂದೇ ಹಳ್ಳಿಯಿಂದ ಮೈಸೂರಿಗೆ ಬಂದವರು. ಪ್ರಾಥಮಿಕ ತರಗತಿಯಲ್ಲಿ ಸಹಪಾಠಿಗಳು.

ರಾಚಮ್ಮ ಗೃಹಿಣಿಯಗಿ, ಸತ್ಯ ಉನ್ನತ ಶಿಕ್ಷಣದ ವಿದ್ಯಾರ್ಥಿಯಾಗಿ ಇಬ್ಬರೂ ಈಗ ಮೈಸೂರಿನಲ್ಲಿ ನೆಲೆಸಿದ್ದಾರೆ. ರಾಚಮ್ಮನ ಪತಿಯಾದ ದೇವ ಪ್ರಸಾದ್, ಸತ್ಯನಿಗೆ ಕಾಲೇಜಿನಲ್ಲಿ ಗುರು. ಅದೇ ಕಾಲೇಜಿನಲ್ಲಿ ಓದುತ್ತಿರುವ, ದೇವ ಪ್ರಸಾದನ ತಂಗಿ ಲಿಲ್ಲಿ ಸತ್ಯನಿಗೆ ಗೆಳತಿ. ಇಷ್ಟೆಲ್ಲ ಸ್ನೇಹ, ಆತ್ಮೀಯತೆ ಆಧುನಿಕ ವಾತಾವರಣ, ಉನ್ನತ ಶಿಕ್ಷಣ ಕೊಡುವ ವೈಚಾರಿಕತೆಗಳ ಸಂಗಡವಿದ್ದರೂ ಸತ್ಯ ಎಂದೂ ಕ್ರೈಸ್ತರಾದ ರಾಚಮ್ಮನ ಮನೆಯಲ್ಲಿ ಹಾಲು ಕುಡಿಯಲು ಸಹ ನಿರಾಕರಿಸುತ್ತಾನೆ. ಜಾತಿ, ಮತಗಳ ಅಸ್ತಿತ್ವವನ್ನು ನಿರಾಕರಿಸುವುದಿರಲಿ, ಸ್ವಮತ ನಿಷ್ಠೆ ಪರಮತ ಸಹಿಷ್ಣುತೆಯಂಥ ಸಹಬಾಳ್ವೆಯ ಮನಸ್ಸು ಸತ್ಯನಾರಾಯಣನಿಗೆ ಇಲ್ಲವಾಗಿದೆ.

ಅಲ್ಲದೆ ಅನ್ಯ ಮತದ ಬಗೆಗೆ ಈ ಕಾದಂಬರಿಯ ನಾಯಕನಿಗೆ ಎಷ್ಟು ಅಸಹನೆ ಇದೆ ಎಂದರೆ ಪದೇ ಪದೇ ಕ್ರೈಸ್ತ ಮತದವರನ್ನು ನಿರಾಕರಿಸುತ್ತಾ, ವಿನಾ ಕಾರಣ ಅಸಹನೆಯನ್ನ ತೋರುತ್ತಲೇ ಇರುತ್ತಾನೆ. "ಹರಿಜನರ ಮನೆಯಲ್ಲಿ ಉಪಾಹಾರ ಮಾಡಿದ್ದೆ. ಆದರೆ ಕ್ರೈಸ್ತರ ಮನೆಯಲ್ಲಿ ನೀರನ್ನೂ ಮುಟ್ಟಬಾರದೆನ್ನುವ ಮನೋಭಾವದ ಹಿಂದೆ ಒಂದು ವಿಧವಾದ ತಿರಸ್ಕಾರವು ನಿಂತಿತ್ತು. ಕ್ರೈಸ್ತ ಮಿಷನರಿಗಳ ದಾಳಿ, ಹಿಂದೂ ಧರ್ಮ ಹಿಂದೂ ಸಮಾಜಗಳಿಗೆ ಅವರಿಂದ ಆಗಿರುವ ಕೆಡುಕುಗಳ ಪ್ರಜ್ಞೆಯಿಂದ ಉಂಟಾದ ಪ್ರತೀಕಾರ ಭಾವವು ನನ್ನಲ್ಲಿ ಬೆರೆತಿತ್ತು" (ಧರ್ಮಶ್ರೀ, ಪುಟ: 159) ಎನ್ನುತ್ತಾನೆ. ಹಿಂದೂ ಧರ್ಮ, ಸನಾತನ ಸಮಾಜದ ಬಗೆಗೆ ಸತ್ಯನಾರಾಯಣನು ಹೊಂದಿರುವ ಧರ್ಮಾಂಧತೆಯನ್ನು ನೆನೆದರೆ 'ಹರಿಜನರ ಮನೆಯಲ್ಲಿ ಉಪಾಹಾರ ಮಾಡಿದ್ದೆ' ಎಂಬ ಮಾತು ಹುಸಿ ಎಂಬುದು ಹೊಳೆಯುತ್ತದೆ. ಇವನು ತೀವ್ರ ಅನಾರೋಗ್ಯದಿಂದ ತನ್ನ ಕೊಠಡಿಯಲ್ಲಿ ಅನಾಥನಾಗಿ ಊಟೋಪಚಾರವಿಲ್ಲದೆ ಬಳಲುತ್ತಿದ್ದಾಗಲೂ ಗೆಳತಿ ಲಿಲ್ಲಿ ತಂದುಕೊಟ್ಟ ಮಾತ್ರೆ ಮತ್ತು ಕಾಫಿಯನ್ನು ಸೇವಿಸಲು ಒದ್ದಾಡುತ್ತಾನೆ. ಅದು ಹೋಟೆಲಿನಿಂದಲೇ ತಂದ ಕಾಫಿಯಾಗಿರುತ್ತದೆ. ಲಿಲ್ಲಿಯು ತನ್ನ ಮನೆಯಿಂದಲೇ ತಂದಿದ್ದಾಳೆ ಎಂದು ಸತ್ಯನಾರಾಯಣ ಭ್ರಮಿಸುತ್ತಾನೆ. "ಅವಳು ಕೊಟ್ಟ ಮಾತ್ರೆಯನ್ನು ಬಾಯಿಗೆ ಹಾಕಿಕೊಂಡೆ. ಕಾಫಿಯ ಲೋಟ ಕೈಗೆ ತೆಗೆದುಕೊಂಡು ಒಂದು ಗುಟುಕನ್ನು ಹೀರಿದ್ದೆ; ಅಷ್ಟರಲ್ಲಿ ನನ್ನ ಸ್ಮೃತಿ ತಿಳಿಯಾಯಿತು. ಲೋಟವನ್ನು ತೆಗೆದು ಗೋಡೆಯ ಕಡೆಗೆ ಒಗೆದೆ. ಗಾಜಿನ ಲೋಟ ಒಡೆದುಹೋಯಿತು. ಕೋಪದಿಂದ ನನ್ನ ಕೈ ನಡುಗುತ್ತಿತ್ತು. ಧ್ವನಿ ಕಂಪಿಸುತ್ತಿತ್ತು. ಈ ಸಮಯವನ್ನೇ ನೋಡಿ ನನಗೆ ನಿಮ್ಮ ಕೈಯಿನ ಕಾಫಿ ಕುಡಿಸಬೇಕು ಅಂತ ಮಾಡಿದ್ದಿರಾ? ಸಾಕು ಈ ಬೂಟಾಟಿಕೆಯ ಸೇವೆ!" (ಧರ್ಮಶ್ರೀ, ಪುಟ: 158) ಇದಂತೂ 'ಧರ್ಮಶ್ರೀ'ಯೊಳಗಿನ ಧರ್ಮಾಂಧತೆಯ ಪರಮಾವಧಿ ಮತ್ತು ಅತ್ಯಂತ ಅಮಾನವೀಯವಾದ ಭಾಗ. ಇಷ್ಟು ತೀವ್ರವಾದ ಮತೀಯತೆ, ಜಾತೀಯತೆ ಸತ್ಯನಾರಾಯಣನಲ್ಲಿ ಮನೆ ಮಾಡಿರುತ್ತದೆ. ತನಗಿಂತ ಕಿರಿಯ ವಿದ್ಯಾರ್ಥಿಗಳಿಗೆ ಮನೆ ಪಾಠ ಮಾಡಿ ಬದುಕುತ್ತಿರುವ ಸತ್ಯನ ಬಳಿಗೆ ಕ್ರೈಸ್ತ ವಿದ್ಯಾರ್ಥಿನಿ ಬಂದಾಗ, ಆ ವಿದ್ಯಾರ್ಥಿನಿಯ ಧರ್ಮವಷ್ಟೇ ಅವನ ಗ್ರಹಿಕೆಯಲ್ಲಿದ್ದು ಒದ್ದಾಡುತ್ತಾನೆ. "ನಾನು ಪಾಠ ಹೇಳುತ್ತಿದ್ದ ಹೆಣ್ಣು ಮಕ್ಕಳು ಕ್ರೈಸ್ತರು. ಎಷ್ಟೋ ವೇಳೆ ನಾನು ಯೋಚಿಸುತ್ತಿದ್ದೆ; ಈ ಕ್ರೈಸ್ತರಿಗೆ ಪಾಠ ಹೇಳಿ ಬಂದ ಹಣದಿಂದ ನಾನು ಓದಬೇಕೆ?" (ಧರ್ಮಶ್ರೀ, ಪುಟ: 140) ಎಂದು ಪ್ರಶ್ನಿಸಿಕೊಳ್ಳುವ ಸತ್ಯನಾರಾಯಣ ಪ್ರಬಲವಾಗಿ ಹಿಂದೂ ಮತೀಯವಾದವನ್ನು ಮಂಡಿಸುತ್ತಾನೆ. ಕಾದಂಬರಿಯ ಈ ಸನ್ನಿವೇಶದಲ್ಲಿ ಅಂತಿಮವಾಗಿ ಕಲೆ ಮತ್ತು ಸಾಹಿತ್ಯ ಮನುಷ್ಯ ಸಮಾಜದಲ್ಲಿ ಯಾಕೆ ಬೇಕು? ಅದರ ಪ್ರಯೋಜನಗಳೇನು? ಸಾಹಿತ್ಯ ಮನುಷ್ಯ ಆಲೋಚನೆ ಮತ್ತು ನಡವಳಿಕೆಗಳನ್ನು ಯಾವ ಮೌಲ್ಯಗಳೊಡನೆ ರೂಪಿಸಬೇಕು? ಮೊದಲಾದ ಮೂಲಭೂತ ಪ್ರಶ್ನೆಗಳು ಧುತ್ತನೆ ಮೂಡುತ್ತವೆ. ಸಾಹಿತ್ಯವು, ಕಲೆಯು ಮನುಷ್ಯರೊಳಗಿನ ಕೊಳಕನ್ನು ನಾಶ ಮಾಡಿ ಮಾನವೀಯತೆಯನ್ನು ರೂಪಿಸಿ ವಿಸ್ತರಿಸುವ

ಚೈತನ್ಯವೆಂದು ನಂಬಿರುವ ಓದುಗರಿಗೆ 'ಧರ್ಮಶ್ರೀ' ಯಾಕೆ ಒಂದು ಸಾಮಾಜಿಕ ಅಸಹನೆಯನ್ನು ಮೂಡಿಸುತ್ತದೆ, ಕೂಡಿಬಾಳುವ ನಡುವೆ ಯಾಕೆ ಗೋಡೆಗಳನ್ನು ಕಟ್ಟುತ್ತಿದೆ ಎಂಬ ಪ್ರಶ್ನೆಗಳು ಉದ್ಭವಿಸುತ್ತವೆ.

ಎಸ್.ಎಲ್. ಭೈರಪ್ಪನವರ 'ಧರ್ಮಶ್ರೀ'ಯು ಸನಾತನ ವೈದಿಕ ಧರ್ಮ ಪ್ರತಿಪಾದಿಸುವ ಸ್ತ್ರೀಯ ಅಧೀನತೆ, ಜಾತೀಯತೆ, ಪಾಪ ಪುಣ್ಯಗಳ ಮೇಲಿನ ನಂಬಿಕೆ, ಪುನರ್ಜನ್ಮದ ಕಲ್ಪನೆ, ಕರ್ಮತತ್ವ- ಇವೆಲ್ಲವುಗಳನ್ನೂ ಎತ್ತಿಹಿಡಿಯುತ್ತದೆ. ಈ ಧೋರಣೆಗಳು ಲಿಲ್ಲಿಯ ಆಳವಾದ ಪ್ರೇಮವನ್ನು ಮಣ್ಣುಗೂಡಿಸುವಾಗ, ಸತ್ಯನಾರಾಯಣನ್ನು ಅಪಾರವಾಗಿ ಪ್ರೇಮಿಸುವ ಲಿಲ್ಲಿ ಅವನನ್ನು ಪಡೆದು ತೀರಲೇಬೇಕು ಎಂಬ ಪ್ರೇಮದ ಸೆಳೆತದಲ್ಲಿ ಕೊನೆಗೆ "ಮುಂದಿನ ಜನ್ಮದಲ್ಲಿಯಾದರೂ ಹಿಂದೂವಾಗಿ ಹುಟ್ಟಿ ನಿಮ್ಮ ಜೊತೆಗಿರ್ತೀನಿ"(ಧರ್ಮಶ್ರೀ, ಪುಟ: 167) ಎನ್ನುತ್ತಾಳೆ. ಹೀಗೆ ಸತ್ಯನಾರಾಯಣ ತನಗಿರುವ ಮತೀಯವಾದದ ಅಂಧಕಾರದಿಂದಾಗಿ ಪ್ರೇಮದ ಆಳವಾದ ಮಾನವೀಯ ನೆಲೆಯನ್ನು ತಲುಪಲಾರದೆ ತೀವ್ರವಾದ ಜೀವಪರ ಮೌಲ್ಯವಾದ ಪ್ರೇಮವನ್ನು ನಿರಾಕರಿಸುತ್ತಾನೆ.

ಹಿಂದೂ ಧರ್ಮ, ಹಿಂದೂ ಸಮಾಜವನ್ನು ಉಳಿಸುವ ಕಾಯಕದಲ್ಲಿ ಸತ್ಯನಾರಾಯಣ ಮುಳುಗಿಹೋಗಿರುತ್ತಾನೆ. ಮೈಸೂರಿನಲ್ಲಿ ಧರ್ಮದ ಉಳಿವಿಗಾಗಿ ಸಂಘದೊಡನೆ ಜೀವನವನ್ನೇ ಮುಡುಪಾಗಿಟ್ಟಿರುವ ರಾಮಣ್ಣ ಮತ್ತವನ ತಮ್ಮ ಶಂಕರನ ಒಡನಾಟ ಸಿಕ್ಕ ಮೇಲಂತು ಸತ್ಯನಾರಾಯಣ ಮುಂಚೂಣಿಯಲ್ಲಿ ನಿಂತು ಕ್ರೈಸ್ತ ಧರ್ಮದ ಉಪದೇಶಗಳು ನಡೆವ ಸ್ಥಳಕ್ಕೆ ಮಿಂಚಿನ ವೇಗದಲ್ಲಿ ಹೋಗಿ ಮತಾಂತರವನ್ನು ತಡೆಯುತ್ತಾನೆ. ಸನಾತನ ಹಿಂದೂ ಧರ್ಮದ ಬಗೆಗೆ ಚಿಂತನೆ ಮಾತ್ರವಲ್ಲ ಕ್ರಿಯಾ ರೂಪದ ಕಾರ್ಯಗಳಿಗೆ ತೊಡಗಿಸಿಕೊಳ್ಳುತ್ತಾನೆ. ಮತೀಯ ಸಂಘರ್ಷಗಳನ್ನು ಹುಟ್ಟಿಸುತ್ತಾನೆ. ವೈರುಧ್ಯವೆಂದರೆ ಇಷ್ಟೆಲ್ಲ ಧರ್ಮ ಜಾಗೃತಿ ಇರುವ ಈ ಸತ್ಯನಾರಾಯಣನಿಗೆ ತನ್ನ ತಾಯಿಯ ಸಾವಿನ ನಂತರ, ತಂದೆಯೂ ಇಲ್ಲವಾಗಿ ತನ್ನೊಬ್ಬಳೇ ತಂಗಿ ಊರಿನಲ್ಲಿ ಅನಾಥವಾಗಿರುವ ನೆನಪೂ ಇರುವುದಿಲ್ಲ. ಆಶ್ರಯವೆಂದರೆ ಧರ್ಮದ ಬಗೆಗೆ, ತನ್ನ ಒಂಟಿತನದ ಬಗೆಗೆ, ತನ್ನ ಓದಿಗೆ ಮೈಸೂರಿನಲ್ಲಿ ಇರುವ ತೊಂದರೆಗಳ ಬಗೆಗೆ ಪುಟಗಟ್ಟಲೇ ವಿವರಿಸುವ ಸತ್ಯನಾರಾಯಣ ತನ್ನ ಅನಾಥ ತಂಗಿಯ ಬಗೆಗೆ ಒಂದು ಮಾತನ್ನೂ ಆಡುವುದಿಲ್ಲ. ಮನುಷ್ಯಮಾತ್ರವಾದವರಿಗೆ ಇದು ಸಾಧ್ಯವೇ! ಆ ನಂತರ ತನ್ನ ಮಾವನ ಮನೆಯಲ್ಲಿರುವ ತಂಗಿಯನ್ನು ಇದ್ದಕ್ಕಿದ್ದಂತೆ ನೆನಪು ಮಾಡಿಕೊಳ್ಳುತ್ತಾನೆ. "ನನಗೆ ಒಬ್ಬಳು ತಂಗಿ ಇರುವಳೆಂಬ ಅಂಶವೇ ನನ್ನ ಗಮನದಲ್ಲಿ ಇರಲಿಲ್ಲ. ಓದು ಸಂಪಾದನೆ ಮತ್ತು ಇತರ ಚಟುವಟಿಕೆಗಳಲ್ಲಿ, ಸತ್ತ ತಾಯಿಯನ್ನಾಗಲಿ ಉಳಿದಿದ್ದ ತಂಗಿಯನ್ನಾಗಲಿ ನೆನಸಿಕೊಳ್ಳುವ ವ್ಯವಧಾನವಿರಲಿಲ್ಲ. ಆ ತಂಗಿ ಇದುವರೆಗೂ ಹೇಗೆ ಬದುಕಿದ್ದಳು, ಹೇಗೆ ಬೆಳೆದಳು ಎಂಬುದು ನನ್ನ ಸ್ಪಷ್ಟ ಕಲ್ಪನೆಗೆ ಎಟುಕಲಿಲ್ಲ." (ಧರ್ಮಶ್ರೀ, ಪುಟ: 97) ಎನ್ನುತ್ತಾನೆ. ಕನಿಷ್ಠ ಮಾನವೀಯ ಸ್ಪರ್ಶವೇ ಇಲ್ಲದ ಸತ್ಯನಾರಾಯಣನ ಈ ವರ್ತನೆಗಳು ಧರ್ಮದ ಬಗೆಗಿನ ಅವನ ಹುಸಿ ಆದರ್ಶಗಳನ್ನು, ಅವನ ವ್ಯಕ್ತಿತ್ವದ ಟೊಳ್ಳುತನವನ್ನು ತೋರಿಸುತ್ತವೆ. ಹೀಗೆ ತನ್ನ ಒಡಹುಟ್ಟಿದವರ ಬಗೆಗೂ ಮಾನವೀಯತೆಯ ಸ್ಪರ್ಶ, ಸ್ಪಂದನವನ್ನೇ ಹೊಂದಿರದ ಮನಸ್ಸುಗಳು ಧರ್ಮದ ಹೆಸರಿನಲ್ಲಿ ನಡೆಸುವ ಎಲ್ಲಾ ಬಗೆಯ ಆಲೋಚನೆಗಳು ಮತ್ತು ಚಟುವಟಿಕೆಗಳು ಹೇಗೆ ಅಮಾನವೀಯವಾಗಿರಬಲ್ಲವು ಎಂಬುದು ಹೊಳೆಯುತ್ತದೆ.

ಸತ್ಯನಾರಾಯಣ, ಲಿಲ್ಲಿಯ ಮೇಲಿನ ಪ್ರೀತಿಗಾಗಿ ಕ್ರೈಸ್ತ ಮತಕ್ಕೆ ಮತಾಂತರವಾದರೂ ಅದೊಂದು ಕಾದಂಬರಿಕಾರರ ಹಿಂದೂ ಧರ್ಮವನ್ನು ಎತ್ತರಕ್ಕೆ ಏರಿಸುವ ತಂತ್ರವೇ ಆಗಿದೆ. ಹಾಗಾಗಿ 'ಧರ್ಮಶ್ರೀ'ಯೊಳಗಿನ ಮತಾಂತರ ಪ್ರೇಮಿಯೊಬ್ಬನ ಅಸಹಾಯಕತೆಯಲ್ಲಿ, ತೀವ್ರವಾದ ಪ್ರೇಮದ ಸೆಳೆದಲ್ಲಿ, ಹೆಣ್ಣಿನ ವ್ಯಾಮೋಹದಲ್ಲಿ ನಡೆದ ಮತಾಂತರವಾಗದೆ, ಲೇಖಕರ ಮತಜಿಜ್ಞಾಸೆಗೆ ವೇದಿಕೆ ಒದಗಿಸಿಕೊಳ್ಳುವ ರಿರ್ಸ್ ಮೆಥೆಡ್‌ನ ಕಥನಾ ನಿರೂಪಣಾ ವಿಧಾನವಾಗಿದೆ. ಬೇಟೆಯನ್ನು ಹಿಡಿಯಲು ಕೃಶವಾದ ಸಾಕು ಪ್ರಾಣಿಯೊಂದನ್ನು ಅಡ್ಡವಿರಿಸುವಂತೆ ಲೇಖಕರು ನಾಯಕ ಸತ್ಯನನ್ನೇ ಕ್ರೈಸ್ತ ಮತಕ್ಕೆ ಮತಾಂತರ

ಮಾಡಿ ಅಲ್ಲಿನ ವೈರುಧ್ಯಗಳನ್ನು ತೋರಿಸುತ್ತಾ, ಅವನೊಡನೆ ಲಿಲ್ಲಿಯೂ ಮರಳಿ ಹಿಂದೂ ಧರ್ಮಕ್ಕೆ ವಾಪಸ್ಸಾಗುವ ಸಂದರ್ಭವನ್ನು ನಿರ್ಮಿಸುತ್ತಾರೆ. ಇದಕ್ಕಾಗಿ ಮತನಿರಪೇಕ್ಷವಾಗಿರುವಂತೆ ಕಾಣುವ ಲಿಲ್ಲಿಯ ಅಣ್ಣ ದೇವ ಪ್ರಸಾದ, ಮೂಲಭೂತವಾದಿಗಳಾಗಿರುವ ಲಿಲ್ಲಿಯ ತಂದೆ, ಬಿಷಪ್ ಮತ್ತು ವೆಲ್ಲಿಂಗ್‌ಟನ್ ಹೈಸ್ಕೂಲಿನ ಅನುಭವಗಳನ್ನು ಲೇಖಕರು ತಮ್ಮ ಸಿದ್ಧಾಂತ ಪ್ರತಿಪಾದನೆಗೆ ಪ್ರತಿಕೂಲವಾದಂತೆ ನಿಭಾಯಿಸುತ್ತಾ ನಿರೂಪಿಸುತ್ತಾರೆ. ಕೊನೆಗೂ ಲಿಲ್ಲಿ ತನ್ನ ಧರ್ಮದ ನೆನಪನ್ನು ತೊರೆದು ಧರ್ಮಶ್ರೀಯಾಗಿ ಬದಲಾಗುತ್ತಾಳೆ. ಆರ್ಯ ಸಮಾಜದ ಮೂಲಕ ಸತ್ಯನಾರಾಯಣ ಮತ್ತು ಧರ್ಮಶ್ರೀ ಹಿಂದೂಗಳಾಗಿ ಹೊಸಜೀವನ ಆರಂಭಿಸುತ್ತಾರೆ. ಇವುಗಳಿಂದಾಗಿ ಈ ಕಾದಂಬರಿಯು ಸನಾತನ ಹಿಂದೂ ಧರ್ಮದ ಪ್ರತಿಷ್ಠಾಪನೆಯ ಆಶಯದ ಜೊತೆಗೆ ಹಿಮ್ಮುಖ ಚಲನೆಯನ್ನು ಆವಾಹಿಸಿಕೊಂಡಿರುವ ಮತೀಯವಾದಿ ಕಥನವಾಗಿ ಕಾಣುತ್ತದೆ.

ಲೇಖಕರು ತಮ್ಮ ಮತೀಯ ಮೂಲಭೂತವಾದದ ತತ್ವಗಳನ್ನು 'ಧರ್ಮ'ದ ಹೆಸರಿನಲ್ಲಿ ಪ್ರಚಾರಗೊಳಿಸುವುದು 'ಧರ್ಮಶ್ರೀ' ಕಾದಂಬರಿಯ ಬಹುದೊಡ್ಡ ತೊಡಕಾಗಿ ಕಾಣುತ್ತದೆ. ಧರ್ಮ ಹೇಳುವ ಮೌಲ್ಯಗಳನ್ನು ಮತ್ತು ತತ್ವಗಳನ್ನು ಪಾಲಿಸುವುದು ಎಲ್ಲ ಧರ್ಮಿಯರಿಗೂ ಸಹಜವೇ ಆಗಿದೆ. ಅಂತೆಯೇ ಜನ 'ಧಾರ್ಮಿಕ'ವಾಗಿರುವುದು ಅತ್ಯಂತ ಸಹಜವೂ ಅಗತ್ಯವೂ ಆಗಿದೆ. ಅಂದರೆ ಪ್ರಶ್ನಿಸಬೇಕಿರುವುದು, ನಿರಾಕರಿಸಬೇಕಿರುವುದು ಧರ್ಮವನ್ನಲ್ಲ, ಧಾರ್ಮಿಕತೆಯನ್ನಲ್ಲ, ಧಾರ್ಮಿಕ ನಂಬಿಕೆಗಳನ್ನಲ್ಲ, ಧರ್ಮದ ತಳಹದಿಯ ಮೇಲೆ ಸೃಷ್ಟಿಸುವ ಧಾರ್ಮಿಕ ಅಸಹಿಷ್ಣುತೆಯನ್ನು, ಧಾರ್ಮಿಕ ಮೂಲಭೂತವಾದವನ್ನು ಮತ್ತು ಧಾರ್ಮಿಕ ಸಂಘರ್ಷ ಮತ್ತು ಹಿಂಸೆಗಳನ್ನು. 'ಧರ್ಮಶ್ರೀ' ಕಾದಂಬರಿಯ ಸಮಾಜದಲ್ಲಿ 'ಧರ್ಮ' ಮತ್ತು 'ಧಾರ್ಮಿಕವಾದ' (ಮತೀಯವಾದ) ಗಳ ನಡುವೆ ಅಂತರವೇ ಇಲ್ಲ ಎಂಬುದನ್ನು ಪ್ರಚುರಪಡಿಸಿತು.

ತಮ್ಮ ದೈನಂದಿನ ಬಾಳ್ವೆಯ ನೋವು ನಲಿವುಗಳ ನಿರ್ವಹಣೆಯೇ ದುಸ್ತರವಾಗಿರುವ ಜನಸಾಮಾನ್ಯರು ಧರ್ಮ, ಧಾರ್ಮಿಕ ತತ್ವಗಳ ಬಗೆಗೆ ಪೂರ್ಣದೃಷ್ಟಿಯಿಂದ ಆಲೋಚಿಸಲು ಕಷ್ಟಸಾಧ್ಯ. ಇಂಥ ಸನ್ನಿವೇಶದಲ್ಲಿ ಸಮಾಜದ ಬೌದ್ಧಿಕವಾಗಿ ಮೇಲುಸ್ತರದ ಸ್ಥಾನವನ್ನು ಪಡೆದು ಸಾಗುವ ಕಲಾವಿದರು ಲೇಖಕರು ಜನಮಾನಸದಲ್ಲಿ ಧಾರ್ಮಿಕ ಸಂಘರ್ಷಗಳನ್ನು ಬಿತ್ತಿ, ಮಾನವೀಯತೆಯ ಸೆಲೆಗಳನ್ನು ಮತ್ತು ಕೂಡಿಬಾಳುವ ಧಾರ್ಮಿಕ ಮನಸ್ಸುಗಳನ್ನು ಭಗ್ನಗೊಳಿಸಬಾರದು. ಈ ಬಗೆಯ ಧಾರ್ಮಿಕ ಭಗ್ನತೆಯನ್ನು ಈ ಕಾದಂಬರಿ ಕಲೆಯ ನೆಪದಲ್ಲಿ ನಿರ್ಮಿಸಿರುವ ಬಗೆ ಸೂಕ್ಷ್ಮವಾಗಿ ಗ್ರಹಿಸಿದರೆ ಹೊಳೆಯುತ್ತದೆ.

'ಧರ್ಮಶ್ರೀ' ಕಾದಂಬರಿಯಲ್ಲೇ ವೈದಿಕ ತತ್ವದ ಅಥವಾ ಬ್ರಾಹ್ಮಣವಾದದ, ಈಗ ಅಖಿಲ ಭಾರತ ಮಟ್ಟದಲ್ಲಿ ತನ್ನ ಅಸ್ಮಿತೆಯನ್ನು ಸ್ಥಾಪಿಸಿಕೊಳ್ಳಲೆತ್ನಿಸುತ್ತಿರುವ ಹಿಂದೂವಾದದ ಆರಾಧನೆಯನ್ನು ಆರಂಭಿಸಿದ ಎಸ್.ಎಲ್. ಭೈರಪ್ಪನವರು ತಮ್ಮ 'ಆವರಣ' ಕಾದಂಬರಿಯೊಳಗೆ ತಮ್ಮ ಹಿಂದೂ ಮತೀಯವಾದದ ಪ್ರತಿಪಾದನೆಯನ್ನು ಮತ್ತಷ್ಟು ಗಟ್ಟಿಗೊಳಿಸಿದ್ದಾರೆ. ಚರಿತ್ರೆ ಸತ್ಯವನ್ನು ಹೇಳುತ್ತದೆ ಎಂಬುದನ್ನು ನಿರಾಕರಿಸಿ, ಚರಿತ್ರೆ ಹಲವು ಸತ್ಯಗಳ ನಿರ್ಮಿತ ಕಥನ ಎಂದು ನಂಬಬೇಕಾಗಿರುವ ಈ ದಿನಗಳಲ್ಲಿ ಚಾರಿತ್ರಿಕ ದಾಖಲೆಗಳೊಂದಿಗೆ 'ಆವರಣ' ಕಾದಂಬರಿಯು ಏಕರೂಪಿ ಸತ್ಯವನ್ನು ಪ್ರತಿಪಾದಿಸುತ್ತದೆ. ಮತೀಯವಾದ, ಮತೀಯ ಮೂಲಭೂತವಾದ, ಚಾರಿತ್ರಿಕ ಕಥನಗಳ ನಿರೂಪಣೆಯ ಅಧ್ಯಯನಗಳ ದೃಷ್ಟಿಯಿಂದ 'ಆವರಣ' ಕಾದಂಬರಿಯ ಬಗೆಗೂ ಶೋಧನೆ ಮುಂದುವರೆಸಲು ಸಾಧ್ಯವಿದೆ. ಈ ದೃಷ್ಟಿಯಿಂದ 'ಧರ್ಮಶ್ರೀ' ಮತ್ತು 'ಆವರಣ' ಭಿನ್ನ ಹೆಸರಿನಲ್ಲಿ ಪ್ರಕಟವಾಗಿರುವ ಕಾದಂಬರಿಗಳಾದರೂ ಒಂದೇ ಅಂಶವನ್ನು ಹಲವು ನೆಲೆಗಳಿಂದ ಹರಳುಗಟ್ಟಿಸಿದಂತೆ ನಿರೂಪಿಸುವ ಕಥನಗಳಾಗಿವೆ. ಈ ಎರಡೂ ಕಾದಂಬರಿಗಳ ತುಲನಾತ್ಮಕ ಅಧ್ಯಯನ ಕನ್ನಡ ಸಾಹಿತ್ಯದಲ್ಲಿನ ಮತೀಯವಾದ, ಮತೀಯ ಮೂಲಭೂತವಾದ, ಚಾರಿತ್ರಿಕ ಕಥನಗಳನ್ನು ಖಚಿತವಾಗಿ ಗುರುತಿಸಲು ಸಾಧ್ಯವಿದೆ. ಈ ಎರಡು ಕಥನಗಳ ಜೊತೆಗೆ ಶಿವರಾಮ ಕಾರಂತರ 'ಚೋಮನದುಡಿ' ಕಾದಂಬರಿಯನ್ನು ತುಲಾನಾತ್ಮಕವಾಗಿ ಅಧ್ಯಯನ ನಡೆಸಿದರೆ ಭಾರತದ

ಸಾಮಾಜಿಕ ಸ್ವರೂಪ, ಧರ್ಮ, ಧಾರ್ಮಿಕ ನಂಬಿಕೆಗಳು, ಮತಾಚಾರಗಳು, ಮತಾಂತರ, ಮತೀಯವಾದ- ಈ ಎಲ್ಲವುಗಳ ಅಂತರ್ ಸಂಬಂಧಗಳು ಮತ್ತು ಸಂಘರ್ಷಗಳನ್ನು ಆಮೂಲಾಗ್ರವಾಗಿ ಅರಿಯಲು ಸಾಧ್ಯವಿದೆ.

**ಪರಾಮರ್ಶನ ಕೃತಿಗಳು:**

1. ಭೈರಪ್ಪ ಎಸ್.ಎಲ್., ಧರ್ಮಶ್ರೀ, ಸಾಹಿತ್ಯ ಭಂಡಾರ, ಬೆಂಗಳೂರು, 2014
2. ರಹಮತ್ ತರೀಕೆರೆ, ಧರ್ಮ ಪರೀಕ್ಷೆ, ನವಕರ್ನಾಟಕ ಪ್ರಕಾಶನ, ಬೆಂಗಳೂರು, 2008
3. ಗಣೇಶ್ ಮೊಗಳ್ಳಿ (ಸಂ), ಮತೀಯ ಭಯಾವತಾರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2009

**Citation:** ಡಾ. ಜಯಶಂಕರ ಎಂ. 2026. “ಧರ್ಮಶ್ರೀ’ : ಮತದ ಸವಾರಿಯ ಕಾದಂಬರಿ”. International Journal of Academic Research, 13(2): 222-226.

**Copyright:** ©2026 ಡಾ. ಜಯಶಂಕರ ಎಂ. This is an open-access article distributed under the terms of the Creative Commons Attribution License (https://creativecommons.org/licenses/by/4.0/), which permits unrestricted use, distribution, and reproduction in any medium, provided the original author and source are credited.